ಶನಿವಾರ 22.11.2025
ಬೆಂಗಳೂರು, ಬೆಲೆ: 5ರೂ,
2 ಪುಟಗಳು
ಸಂಪುಟ 01 - ಸಂಚಿಕೆ 105
Digital Varthe Kannada Daily
Volume 01 - Issue 105
saturday 22.11.2025
Price: 5/- Rs
2 Pages Bangalore

PRGI/RNI: KNKAN/25/A1348

# ಡಿಜಿಟಲ್ ವಾರ್ತೆ

ಕನ್ನಡಿಗರ ಶಕ್ತಿ

ಕನ್ನಡ ದಿನಪತ್ರಿಕೆ

DIGITAL VARTHE
digitalvarthe@gmail.com
www.digitalvarthe.com

## ರಾಸಾಯನಿಕ ಕಾರ್ಖಾನೆಯಲ್ಲಿ ಬಾಯ್ಲರ್ ಸ್ಫೋಟ 15 ಮಂದಿ ಸಾವು



**ಇಸ್ಲಾಮಾಬಾದ್**: ಪಾಕಿಸ್ತಾನದ ರಾಸಾಯನಿಕ ಕಾರ್ಖಾನೆಯಲ್ಲಿ ಸಂಭವಿಸಿದ ಬಾಯ್ಲರ್ ಸ್ಫೋಟದಲ್ಲಿ 15 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಫೈಸಲಾಬಾದ್ ಜಿಲ್ಲೆಯ ಮಲಿಕ್‌ಪುರದಲ್ಲಿರುವ ರಾಸಾಯನಿಕ ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿತ್ತು.

ಪ್ರಬಲ ಸ್ಫೋಟದಿಂದ ಕಟ್ಟಡ ಕುಸಿತ ಕಾರ್ಖಾನೆಯ ಒಂದು ಬದಿಯ ಕಟ್ಟಡ ಕುಸಿದಿದೆ. ಫೈಸಲಾಬಾದ್ ಉಪ ಆಯುಕ್ತ ರಾಜಾ ಜಹಾಂಗೀರ್ ಅನ್ವರ್ ಮಾತನಾಡಿ, ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದ್ದು, ಹೆಚ್ಚಿನ ಜನರು ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ರಕ್ಷಣಾ ತಂಡಗಳು ಅವಶೇಷಗಳಿಂದ 15 ಮೃತ ದೇಹಗಳನ್ನು ಹೊರತೆಗೆದಿವೆ ಮತ್ತು ಏಳು ಗಾಯಾಳುಗಳನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಎಂದು ಅನ್ವರ್ ಹೇಳಿದ್ದಾರೆ. ರಕ್ಷಣಾ ತಂಡಗಳು ಅವಶೇಷಗಳನ್ನು ತೆರವುಗೊಳಿಸುವಲ್ಲಿ ನಿರತವಾಗಿವೆ. ಇಡೀ ಜಿಲ್ಲಾ ಯಂತ್ರೋಪಕರಣಗಳು ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿವೆ.

ಅಗ್ನಿಶಾಮಕ ದಳ ಮತ್ತು ಇತರ ಸಂಬಂಧಿತ ಸಂಸ್ಥೆಗಳು ಸೇರಿದಂತೆ ಎಲ್ಲಾ ತುರ್ತು ಪ್ರತಿಕ್ರಿಯೆ ತಂಡಗಳಿಗೆ ಪರಿಣಾಮಕಾರಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಪಂಜಾಬ್ ಮುಖ್ಯಮಂತ್ರಿ ಮರ್ಯಮ್ ನವಾಜ್ ದುರಂತದ ಬಗ್ಗೆ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ ಮತ್ತು ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ. ಘಟನೆಯ ಕುರಿತು ಫೈಸಲಾಬಾದ್ ಆಯುಕ್ತರಿಂದ ವಿವರವಾದ ವರದಿಯನ್ನು ಕೇಳಿದ್ದಾರೆ.

ಬಾಯ್ಲರ್ ಸ್ಫೋಟದ ಕಾರಣವನ್ನು ನಿರ್ಧರಿಸಲು ಅಧಿಕಾರಿಗಳು ತನಿಖೆಯನ್ನು ಪ್ರಾರಂಭಿಸಿದ್ದಾರೆ ಮತ್ತು ಈ ಪ್ರದೇಶದ ಇತರ ರಾಸಾಯನಿಕ ಕಾರ್ಖಾನೆಗಳ ಸುರಕ್ಷತಾ ತಪಾಸಣೆಗಳನ್ನು ತೀವ್ರಗೊಳಿಸಲಾಗಿದೆ ಎಂದು ವರದಿಯಾಗಿದೆ.

2023 ರಲ್ಲಿ, ಸಿಯಾಲ್‌ಕೋಟ್‌ನ ಜವಳಿ ಕಾರ್ಖಾನೆಯಲ್ಲಿ ಸಂಭವಿಸಿದ ಅನಿಲ ಸೋರಿಕೆಯು ಅನೇಕ ಜನರ ಸಾವಿಗೆ ಕಾರಣವಾಗಿತ್ತು. ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸದಿದ್ದರೆ, ಇಂತಹ ದುರಂತ ಘಟನೆಗಳು ಮರುಕಳಿಸಬಹುದು ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ.

## 7.11 ಕೋಟಿ ಲೂಟಿ ಪ್ರಕರಣ: ದರೋಡೆ ಮಾಸ್ಟರ್‌ಮೈಂಡ್ ಕಾನ್ಸ್ಟೇಬಲ್ ಅಣ್ಣಪ್ಪ ನಾಯ್ಕ್



**ಬೆಂಗಳೂರು**: ಬೆಂಗಳೂರಿನಲ್ಲಿ ನಡೆದ 7.11 ಕೋಟಿ ರೂಪಾಯಿ ದರೋಡೆ ಪ್ರಕರಣಕ್ಕೆ ಬಿಗ್ ಟ್ವಿಸ್ಟ್ ಸಿಕ್ಕದೆ .ದರೋಡೆಯ ಮಾಸ್ಟರ್‌ಮೈಂಡ್ ಪೊಲೀಸ್ ಕಾನ್ಸ್ಟೇಬಲ್ ಎಂದು ಬಹಿರಂಗವಾಗಿದ್ದು, ಗೋವಿಂದಪುರ ಪೊಲೀಸ್ ಠಾಣೆಯ ಕಾನ್ಸ್ಟೇಬಲ್ ಅಣ್ಣಪ್ಪ ನಾಯ್ಕ್ ನನ್ನು ದಕ್ಷಿಣ ವಿಭಾಗದ ಪೊಲೀಸ್ ತಂಡ ತೀವ್ರ ವಿಚಾರಣೆಗಾಗಿ ಬಂಧಿಸಿದ್ದಾರೆ.

ನವೆಂಬರ್ 19ರ ಬುಧವಾರ ಅಶೋಕ ಪಿಲ್ಲರ್ ಜಂಕ್ಷನ್ ಬಳಿಯ ರಸ್ತೆಯಲ್ಲಿ ಸಿಎಂಎಸ್ ಸೆಕ್ಯೂರಿಟಿ ಏಜೆನ್ಸಿಯ ಎಟಿಎಂ ಕ್ಯಾಶ್ ವ್ಯಾನ್ ಮೇಲೆ ಏಕಾಏಕಿ ದರೋಡೆಗಾರರು ದಾಳಿ ಮಾಡಿದ್ದರು. ಆರ್‌ಬಿಐ ಅಧಿಕಾರಿಗಳಂತೆ ಡ್ರೆಸ್ ಧರಿಸಿದ 5-6 ಮಂದಿ ಆಕ್ರಮಣಕಾರರು ವ್ಯಾನ್‌ನ್ನು ನಿಲ್ಲಿಸಿ, ಸಿಬ್ಬಂದಿಯನ್ನು ಧಮಕಿ ಹಾಕಿ, 7.11 ಕೋಟಿ ರೂಪಾಯಿ ದೋಚಿದ್ದರು. ದರೋಡೆಗಾರರು ವ್ಯಾನ್‌ನ ಡಿವಿಆರ್ (ಸಿಸಿಟಿವಿ ರೆಕಾರ್ಡರ್) ಸಹ ತೆಗೆದುಕೊಂಡಿದ್ದರಿಂದ ಆಂತರಿಕ ದೃಶ್ಯಗಳು ಲಭ್ಯವಾಗಿಲ್ಲ. ದರೋಡೆಯ ನಂತರ 45 ನಿಮಿಷಗಳ ಕಲ್ ಬಂದಿದ್ದು, ಇದರಿಂದ ಇನ್‌ಸೈಡರ್ ಮೇಲೆ ಶಂಕೆ ಮೂಡಿತ್ತು. ಪೊಲೀಸ್ ತನಿಖೆಯಲ್ಲಿ, ದರೋಡೆಯ ಸ್ಥಳದ ಬಳಿಯ ಸಕ್ರಿಯ ಮೊಬೈಲ್ ನಂಬರ್‌ಗಳನ್ನು ಟ್ರ್ಯಾಕ್ ಮಾಡಿದಾಗ ಅಣ್ಣಪ್ಪ ನಾಯ್ಕ್ ಮತ್ತು ಸಿಎಂಎಸ್ ಮಾಜಿ ಉದ್ಯೋಗಿ ಒಬ್ಬರ ಸಂಪರ್ಕ ಬೆಳಕಿಗೆ ಬಂದಿತು. ಇಬ್ಬರೂ ಕಳೆದ 6 ತಿಂಗಳಿಂದ ಸ್ನೇಹಿತರಾಗಿದ್ದು, ದರೋಡೆಯನ್ನು ಮಾಸ್ಟರ್ ಪ್ಲಾನ್ ಮಾಡಿದ್ದಾರೆ ಎಂದು ಪೊಲೀಸ್ ಸೋರ್ಸ್‌ಗಳು ತಿಳಿಸಿವೆ. ಅಣ್ಣಪ್ಪ ನಾಯ್ಕ್ ತಾನು ಗೋವಿಂದಪುರ ಠಾಣೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಪೊಲೀಸ್ ಪ್ರೊಸೀಜರ್‌ಗಳನ್ನು ಚೆನ್ನಾಗಿ ತಿಳಿದು, ಹುಡುಗರಿಗೆ ದರೋಡೆಯ ತಂತ್ರಗಳನ್ನು ಕಲಿಸಿದ್ದಾರೆ. ಹೇಗೆ ದಾಳಿ ಮಾಡಬೇಕು, ಹೇಗೆ ತಪ್ಪಿಸಿಕೊಳ್ಳಬೇಕು, ಪೊಲೀಸ್ ಟ್ರ್ಯಾಕಿಂಗ್ ತಪ್ಪಿಸುವುದು ಹೇಗೆ ಎಂಬುದರಲ್ಲಿ ತರಬೇತಿ



ನೀಡಿದ್ದಾರೆ ಎಂದು ತನಿಖೆಯಲ್ಲಿ ಬಹಿರಂಗವಾಗಿದೆ.

ಈ ಗ್ಯಾಂಗ್‌ನಲ್ಲಿ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳದಿಂದ ಬಂದ ಹುಡುಗರು ಸೇರಿದ್ದಾರೆ. ಕಲ್ಯಾಣ್ ನಗರದಲ್ಲಿ ಕೆಲವರು ವಾಸಿಸುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಿಎಂಎಸ್ ಮಾಜಿ ಉದ್ಯೋಗಿಯೊಬ್ಬರು ಇದರಲ್ಲಿ ಪಾತ್ರ ವಹಿಸಿದ್ದು, ವ್ಯಾನ್‌ನ ರೂಟ್ ಮತ್ತು ಸಮಯದ ಮಾಹಿತಿ ನೀಡಿದ್ದಾರೆ. ದರೋಡೆಗಾರರು ಆರ್‌ಬಿಐ ಅಧಿಕಾರಿಗಳಂತೆ ಬಟ್ಟೆ ಧರಿಸಿ, ಮಾರಕಸ್ತ್ರಗಳಿಂದ ವ್ಯಾನ್ ಸಿಬ್ಬಂದಿಗೆ ಬೆದರಿಕೆ ಹಾಕಿ ಹಣ ದೋಚಿದ್ದಾರೆ.

ಈ ಬಗ್ಗೆ ಮಾತನಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಪೊಲೀಸರಿಗೆ ನಿರ್ದಿಷ್ಟ ಮೂಲಗಳು ಸಿಕ್ಕಿವೆ, ಶೀಘ್ರವಾಗಿ ಅಪರಾಧಿಗಳನ್ನ ಬಂಧಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಇನ್ನೂ ಗೃಹ ಸಚಿವ ಜಿ. ಪರಮೇಶ್ವರ ಪ್ರತಿಕ್ರಿಯಿಸಿ, ಇದು ಬೆಂಗಳೂರಿನಲ್ಲಿ ಮೊದಲ ಬಾರಿ ಈ ರೀತಿ ಘಟನೆ ನಡೆದಿದೆ. ಇದಕ್ಕೆ ಸಂಬಂಧಪಟ್ಟಂತೆ, 8 ವಿಶೇಷ ತಂಡಗಳು ಮತ್ತು 200ಕ್ಕೂ ಹೆಚ್ಚು ಸಿಬ್ಬಂದಿಯೊಂದಿಗೆ ತನಿಖೆ ನಡೆಯುತ್ತಿದೆ" ಎಂದು ತಿಳಿಸಿದ್ದಾರೆ.

## ವಾಯು ಮಾಲಿನ್ಯ ತಡೆಗಟ್ಟಲು ಪರಿಸರ ಸಂಪತ್ತು ಉಳಿಸಿ ಬೆಳೆಸುವಂತೆ ಸಾರ್ವಜನಿಕರಿಗೆ ಎಆರ್ ಟಿಒ ಜಿಬಿ. ಸುದೀರ್ ಕರೆ



**ದೇವನಹಳ್ಳಿ** : ಕರ್ನಾಟಕದಲ್ಲಿ ಪರಭಾಷೆಗರ ಹಾವಳಿ ತಪ್ಪಿಸಲು ಮಾತೃಭಾಷೆ ಕನ್ನಡಕ್ಕೆ ಅಪಾರ ಗೌರವ ನೀಡಿದಾಗ ಮಾತ್ರ ನೆಲ ಜಲ ಸಂಸ್ಕೃತಿ ಪರಂಪರೆ ಉಳಿಯಲು ಸಾಧ್ಯವೆಂದು ದೇವನಹಳ್ಳಿ ಎಆರ್ ಟಿಒ ಅದಿಕಾರಿ ಜಿಬಿ. ಸುದೀರ್ ಅಭಿಪ್ರಾಯಿಸಿದರು.

ದೇವನಹಳ್ಳಿ ಪಟ್ಟಣದ ಹಳೆ ಬಸ್ ನಿಲ್ದಾಣದ ಬಳಿ ಜೈ ಭುವನೇಶ್ವರಿ ಕನ್ನಡ ಯುವಕರ ಸಂಘ, ವಾಹನ ಮಾಲಿಕರು ಮತ್ತು ಚಾಲಕರ ಸಂಘ ದಿಂದ ಹಳೇ ಬಸ್ ನಿಲ್ದಾಣದ ಕಾರು, ಟೆಂಪೊ, ಆಟೋ ಸ್ಟಾಂಡ್ ಬಳಿ ಮೆರವಣಿಗೆ ದೇವರುಗಳಾದ ಅಣ್ಣಮ್ಮ, ದೊಡ್ಡಮ್ಮ, ಮುನೇಶ್ವರ ವಿಷೇಶ ಪೂಜೆ ಮತ್ತು ಕನ್ನಡ ಹಬ್ಬ ಶಿರ್ಷಿಕೆ ಅಡಿ 12 ನೇ ವರ್ಷದ ಅದ್ದೂರಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ದೆ ಹ ಲಿ ಯ ಲ್ಲಿ ವಾಯುಮಾಲಿನ್ಯದ ಆತಂಕಕ್ಕೆ ಹೆದರಿ ಬೆಂಗಳೂರಿನ ಸುತ್ತಮುತ್ತ ಅಲ್ಲಿನ ನಿವಾಸಿಗಳು ವಲಸೆ ಬರುವಂತಾಗಿದೆ ಕಾರಣ ಇಲ್ಲಿನ ಸಮೃದ್ಧಿಯ ಪರಿಸರ ಹಾಗೂ ಸ್ವಚ್ಛ ಹಾಗೂ ಶುದ್ಧವಾದ ಗಾಳಿಯಿಂದ ಬದುಕಬಹುದಾಗಿದೆ ಎಂದು ತಿಳಿದು ಹೆಚ್ಚೆಚ್ಚು ಜನಸಂಖ್ಯೆ , ನೆಲೆಸುತ್ತಿದ್ದಾರೆ ಮುಂದಿನ ಪೀಳಿಗೆಯ ಜನಸಾಮಾನ್ಯರಿಗೆ ಉತ್ತಮ ಗಾಳಿ ಹಾಗೂ ಪರಿಸರ ವನ್ನು ಉಳಿಸಲು ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಲಿ. ತಮ್ಮ ಮನೆಯ ಹಾಗೂ ಸುತ್ತಮುತ್ತ ಲಿನ ಪ್ರದೇಶಗಳಲ್ಲಿ ಗಿಡಮರಗಳನ್ನು ನೆಟ್ಟು ಪೋಷಿಸಿ ದರೆ ಮಾತ್ರ ವಾಯು ಮಾಲಿನ್ಯ ತಡೆಗಟ್ಟಬಹುದಾಗಿದೆ. ಆಟೋ ಟೆಂಪೊ, ಕಾರು ಮಾಲೀಕರು ತಮ್ಮ ವಾಹನದ ದಾಖಲೆಗಳನ್ನು ಪರೀಕ್ಷಿಸಿಕೊಳ್ಳಬೇಕು. ಮದ್ಯಪಾನ ಸೇವಿಸದೆ ರಸ್ತೆಯ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕುವಾಹನ ಚಾಲಕರು ಆರೋಗ್ಯದಿಂದ ಕೂಡಿರಬೇಕು ತಮ್ಮ ಆರೋಗ್ಯದ ಮೇಲೆ ನಿಗಾ ಇಟ್ಟರೆ ಮಾತ್ರ ನಿಮ್ಮ ಕುಟುಂಬದ ಸದಸ್ಯರು ನೆಮ್ಮದಿಯಿಂದ ಬದುಕಲು ಸಾಧ್ಯ ಇತ್ತೀಚೆಗೆ ವಾಹನ ಅಪಘಾತಗಳು ಹೆಚ್ಚಾಗುತ್ತಿದೆ ಅದನ್ನು ತಪ್ಪಿಸಲು ಮುಂಜಾಗ್ರತ ವಹಿಸಬೇಕೆಂದು ವಾಯುಮಾಲಿನ್ಯದ ಬಗ್ಗೆ ತಿಳುವಳಿಕೆ ನೀಡಿದರು.

ಈ ಸಂದರ್ಭದಲ್ಲಿ ಎಆರ್ ಟಿಒ ಜಿಬಿ. ಸುದೀರ್, ಸಿಬ್ಬಂದಿ ಅರುಣಾ, ಸಿಂಧು, ನರಸಿಂಹ ಮೂರ್ತಿ, ಶ್ವೇತ, ಹರ್ಷ, ರಾಕೇಶ್, ಟ್ರಾಫಿಕ್ ಪೋಲೀಸ್ ಮುರಳಿಧರ್,ಪುರಸಬೆ ಮಾಜಿ ಸದಸ್ಯ ಮಂಜುನಾಥ್, ಜೈ ಭುವನೇ ಶ್ವರಿ ಕನ್ನಡ ಯುವಕರ ಸಂಘ, ವಾಹನ ಮಾಲಿಕರು ಮತ್ತು ಚಾಲಕರ ಸಂಘ ಪದಾಧಿಕಾರಿಗಳಾದ ರಾಜಣ್ಣ, ಅಶೋಕ್, ರಾಜು, ನಾಗ, ರಮೇಶ್, ವೆಂಕಟೇಶ್ ಸೇರಿದಂತೆ ಕನ್ನಡಬಿಮಾನಿಗಳು ಹಾಜರಿದ್ದರು.

## ಕಬ್ಬು ಕಟಾವು ಯಂತ್ರಕ್ಕೆ ಸಿಲುಕಿ ಮಹಿಳೆ ದಾರುಣ ಸಾ*ವು.

**ಬೆಳಗಾವಿ** :ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಸಪ್ತಸಾಗರ ಗ್ರಾಮದಲ್ಲಿ ಗುರುವಾರ ಭಯಾನಕ ದುರಂತ ನಡೆದಿದೆ. ಕಬ್ಬು ಕಟಾವು ಮಾಡುತ್ತಿದ್ದ ಬೃಹತ್ ಹಾರ್ವೆಸ್ಟರ್ ಯಂತ್ರಕ್ಕೆ ಸಿಲುಕಿ ಸ್ಥಳದಲ್ಲೇ ಮಹಿಳೆ ದಾರುಣವಾಗಿ ಮೃತಪಟ್ಟಿದ್ದಾರೆ. 54 ವರ್ಷದ ಶೋಭಾ ಶ್ರೀಕಾಂತ ಸಂಕ್ರಟ್ಟಿ ಘಟನೆಯಲ್ಲಿ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ.

ತಮ್ಮ ದೇ ಜಮೀನಿನಲ್ಲಿ ಯಂತ್ರದಿಂದ ಕಬ್ಬು ಕಟಾವು ನಡೆಯುತ್ತಿತ್ತು. ಶೋಭಾ ಯಂತ್ರದ ಹಿಂದೆ ಬೀಳುತ್ತಿದ್ದ ಕಬ್ಬುಗಳನ್ನು ಆರಿಸಿ ಸರಿದೂಗಿಸುವ ಕೆಲಸ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಆಕಸ್ಮಿಕವಾಗಿ ಕಾಲು ಜಾರಿ ಯಂತ್ರದ ತಿರುಗುವ ಬ್ಲೇಡ್‌ಗೆ ಸಿಲುಕಿಕೊಂಡಿದ್ದಾರೆ. ಕ್ಷಣಾರ್ಧದಲ್ಲಿ ಭಯಾನಕ ಅಪಘಾತ ಸಂಭವಿಸಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಮಧ್ಯಾಹ್ನ 2 ಗಂಟೆ ಸುಮಾರಿಗೆ ಘಟನೆ ಸಂಭವಿಸಿದ್ದು, ಘಟನೆ ನಡೆದ ತಕ್ಷಣ ಸ್ಥಳೀಯರು ಯಂತ್ರದ ಆಪರೇಟರ್ ಅನ್ನು ನಿಲ್ಲಿಸಲೂ ಪ್ರಯತ್ನಿಸಿದರೂ ಈಗಾಗಲೇ ಶೋಭಾ ರಕ್ತದ ಮಡುವಿನಲ್ಲಿ ಸಾವನ್ನಪ್ಪಿದ್ದರು.

ತಕ್ಷಣ ಅಥಣಿ ಗ್ರಾಮಾಂತರ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶಿವಾನಂದ ಭೋಜಿ ನೇತೃತ್ವದಲ್ಲಿ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಅಥಣಿ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಕುರಿ ತೊಳೆಯಲು ಕೆರೆಗಿಳಿದ ವೈದ್ಯ ದಂಪತಿ ನೀರುಪಾಲು

ರಾಮನಗರ ತಾಲೂಕಿನ ಕೂಟಗಲ್ ಹೋಬಳಿಯ ಗುಂಗರಹಳ್ಳಿ ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ಹೃದಯವಿದ್ರಾವಕ ದುರಂತ ನಡೆದಿದೆ. ಕುರಿಗಳನ್ನು ತೊಳೆಯಲು ಸ್ಥಳೀಯ ಕೆರೆಗೆ ತೆರಳಿದ್ದ ವೈದ್ಯ ದಂಪತಿ ಇಬ್ಬರೂ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಮೃತರು ಗುಂಗರಹಳ್ಳಿ ಗ್ರಾಮದ ಡಾ. ಲಕ್ಷ್ಮಣ್ (71) ಮತ್ತು ಅವರ ಪತ್ನಿ ಜಯಮ್ಮ (60).

ಗುರು ವಾರ ಮಧ್ಯಾಹ್ನ ಸುಮಾರು 1:30ರ ಸಮಯದಲ್ಲಿ ಲಕ್ಷ್ಮಣ್ ದಂಪತಿ ತಮ್ಮ ಮನೆ ಬಳಿಯೇ ಇರುವ ಕೆರೆಗೆ ಕುರಿಗಳನ್ನು ಕರೆದುಕೊಂಡು ಹೋಗಿದ್ದರು. ಕೆರೆಯ ಆಳವಿಲ್ಲದ ಭಾಗದಲ್ಲಿ ಕುರಿಗಳನ್ನು ತೊಳೆಯುತ್ತಿದ್ದ ವೇಳೆ ಆಕಸ್ಮಿಕವಾಗಿ ಲಕ್ಷ್ಮಣ್ ಅವರ ಕಾಲು ಜಾರಿ ಆಳವಾದ ನೀರಿನಲ್ಲಿ ಬಿದ್ದಿದ್ದಾರೆ. ಕೂಗಾಟ ಕೇಳಿ ಪತಿಯನ್ನು ರಕ್ಷಿಸಲು ಜಯಮ್ಮ ಅವರು ಓಡಿಬಂದು ನೀರಿಗೆ ಇಳಿದಿದ್ದಾರೆ. ಆದರೆ ಇಬ್ಬರೂ ಈಜಲು ಬಾರದ ಕಾರಣ ನೀರಲ್ಲಿ ಮುಲುಗಿ ಸಾವನ್ನಪ್ಪಿದ್ದಾರೆ.

ಕರೆಯ ಸುತ್ತಲೂ ಕೆಲಸ ಮಾಡುತ್ತಿದ್ದ ರೈತರು ಮತ್ತು ನೆರೆಹೊರೆಯವರು ಕೂಗಾಟ ಕೇಳಿ ಓಡಿಬಂದಾಗ ದಂಪತಿಗಳು ನೀರಿನಲ್ಲಿ ಮಾಯವಾಗಿದ್ದರು. ತಕ್ಷಣ ಸ್ಥಳೀಯರು ರಾಮನಗರ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದರು. ಕೂಟಗಲ್ ಅಗ್ನಿಶಾಮಕ ಠಾಣೆಯ ಸಿಬ್ಬಂದಿ 15 ನಿಮಿಷಗಳಲ್ಲಿಯೇ ಸ್ಥಳ ತಲುಪಿ, ಬೋಟ್ ಮತ್ತು ಈಜು ತಜ್ಞರ ಸಹಾಯದಿಂದ ಶೋಧ ಕಾರ್ಯ ಆರಂಭಿಸಿದರು. ಸುಮಾರು ಒಂದು ಗಂಟೆಯ ತೀವ್ರ ಪ್ರಯತ್ನದ ನಂತರ ಇಬ್ಬರ ಮೃತದೇಹಗಳನ್ನೂ ಕೆರೆ ಯಿಂದ ಹೊರತೆಗೆಯಲಾಯಿತು. ಆದರೆ ಆಗಲೇ ಇಬ್ಬರೂ ಮೃತಪಟ್ಟಿದ್ದರು.

ಡಾ. ಲಕ್ಷ್ಮಣ್ ಅವರು ಗುಂಗರಹಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ 40 ವರ್ಷಗಳಿಂದ ಖ್ಯಾತ ವೈದ್ಯರಾಗಿದ್ದರು. ಆಯುರ್ವೇದ ಮತ್ತು ಆಧುನಿಕ ಚಿಕಿತ್ಸೆಯಲ್ಲಿ ಪರಿಣತಿಯನ್ನು ಹೊಂದಿದ್ದ ಅವರು ಬಡ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡುತ್ತಿದ್ದ ದಾಖಲೆಯಿದೆ. ಜಯಮ್ಮ ಅವರು ಮನೆ ನಿರ್ವಹಣೆಯ ಜೊತೆಗೆ ಪತಿಯ ಚಿಕಿತ್ಸಾ ಲಯದಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದರು. ದಂಪತಿಗಳಿಗೆ ಇಬ್ಬರು ಮಕ್ಕಳಿದ್ದು, ಒಬ್ಬ ಮಗ ಬೆಂಗಳೂರಿನಲ್ಲಿ ವೈದ್ಯಕೀಯ ವೃತ್ತಿಯಲ್ಲಿದ್ದಾರೆ. ಮತ್ತೊಬ್ಬ ಮಗಳು ವಿದೇಶದಲ್ಲಿದ್ದಾರೆ.

ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪೊಲೀಸ್ ಇನ್ಸ್‌ಪೆಕ್ಟರ್ ರಾಜೇಶ್ ನೇತೃತ್ವದಲ್ಲಿ ಸ್ಥಳ ಮಹಜರ್ ನಡೆಸಿ, ಶವಗಳನ್ನು ರಾಮನಗರ ಜಿಲ್ಲಾ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಲಾಗಿದೆ.

## ಪಕ್ಕದ ಜಮೀನಿನವರನ್ನ ಜೈಲಿಗೆ ಕಳಿಸಬೇಕೆಂದು ಸ್ವಂತ ಮಗಳನ್ನೇ ಕೊಂದ ತಂದೆ



**ಕಲಬುರಗಿ:** ವಿಕಲಚೇತನ ಮಗಳನ್ನ ಕೊಲೆ ಮಾಡಿ ಆತ್ಮಹತ್ಯೆ ಎಂದು ಬಿಂಬಿಸಿದ್ದ ತಂದೆಯನ್ನು ಪೊಲೀಸರು ಅರೆಸ್ಟ್ ಮಾಡಿರುವಂತಹ ಘಟನೆ ಕಲಬುರಗಿ ತಾಲ್ಲೂಕಿನ ಕಲ್ಲಹಂಗರಗಾ ಗ್ರಾಮದಲ್ಲಿ ನಡೆದಿದೆ. ಮಂಜುಳಾ (17) ಕೊಲೆಯಾದ ಮಗಳು. ಗುಂಡೆರಾವ್ ನೀಲೂರ ಕೊಲೆ ಮಾಡಿದ ತಂದೆ. ಸಬ್ ಅರ್ಬನ್ ಪೊಲೀಸರ ತನಿಖೆ ವೇಳೆ ಆತ್ಮಹತ್ಯೆಯಲ್ಲ ಕೊಲೆ ಎನ್ನುವುದು ಬೆಳಕಿಗೆ ಬಂದಿದೆ.

**ನಡೆದದ್ದೇನು?**

ಜಮೀನು ವ್ಯಾಜ್ಯದ ವಿಚಾರದಲ್ಲಿ ಪಕ್ಕದ ಜಮೀನಿನವರ ಕಾಟ ಹಿನ್ನೆಲೆ ಅವರನ್ನು ಜೈಲಿಗೆ ಕಳಿಸಬೇಕು ಅಂತ ತಂದೆ ಗುಂಡೆರಾವ್ ನೀಲೂರ ಸ್ವಂತ ತಮ್ಮ ಮಗಳನ್ನೇ ನೇಣು ಬಿಗಿದು ಕೊಲೆ ಮಾಡಿದ್ದಾರೆ. ಬಳಿಕ ಪಕ್ಕದ ಜಮೀನಿನವರ ಹೆಸರು ಡೆತ್‌ನೋಟ್ ನಲ್ಲಿ ಬರೆದು ಮಗಳ ಕೈಯಲ್ಲಿಟ್ಟು ಆತ್ಮಹತ್ಯೆ ಎಂದು ಬಿಂಬಿಸಲು ಮುಂದಾಗಿದ್ದಾರೆ. ಆದರೆ ಅನುಮಾನಗೊಂಡು ವಿಚಾರಣೆ ಮಾಡಿದ ಪೊಲೀಸರು ಈ ವೇಳೆ ಆತ್ಮಹತ್ಯೆಯಲ್ಲ ಕೊಲೆ ಅನ್ನೋದು ಬೆಳಕಿಗೆ ಬಂದಿದೆ. ಕಾರು ಡಿಕ್ಕಿ: ಬೈಕ್ ಸವಾರ ಸ್ಥಳದಲ್ಲೇ ಸಾವು

ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವಂತಹ ಘಟನೆ ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದ ಹೊರವಲಯದ ಸಿದ್ಧಾರ್ಥ ನಗರ ಕ್ರಾಸ್ ಬಳಿ ನಡೆದಿದೆ. ಕೋಟಗ್ಯಾಳ್ ಗ್ರಾಮದ ನಿವಾಸಿ ಲಹುಕುಮಾರ ಬಿರಾದಾರ (35) ಮೃತ ಬೈಕ್ ಸವಾರ. ಈ ಕುರಿತು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಎರಡು ಬೈಕ್‌ಗಳಲ್ಲಿ ಮೂವರು ಸ್ನೇಹಿತರು ಮಾತನಾಡುತ್ತ ತೆರಳುತ್ತಿದ್ದರು.


ಈ ವೇಳೆ ಎದುಗಡೆಯಿಂದ ಬಂದ ಕಾರು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ನಿನ್ನೆ ರಾತ್ರಿ 7:30ರ ಸುಮಾರಿಗೆ ಸಂಭವಿಸಿದ ಭಯಾನಕ ಅಪಘಾತದ ದೃಶ್ಯ ಸಿಸಿಟಿವಿಯಲ್ಲಿ ಸೆರೆ ಆಗಿದೆ. ಇನ್ನು ಬೈಕ್ ಹಿಂಬದಿಯಲ್ಲಿ ಕುಳಿತಿದ್ದ ಅರ್ಜುನ್ ಹಾಗೂ ಇನ್ನೊಂದು ಬೈಕ್ ಸವಾರ ಬಾಲಾಜಿ ಗಂಭೀರ ಗಾಯಗೊಂಡಿದ್ದಾರೆ. ಭಾಲ್ಕಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಲಾಗಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಬೀದರ್ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ.

## ದೊಡ್ಡಬಳ್ಳಾಪುರದ ಕಾಡನೂರು ಕೈ ಮರ ಬಳಿ ಕಾರು-ಲಾರಿ ಅಪಘಾತ ಗಾಯಗೊಂಡವರು ಆಸ್ಪತ್ರೆಗೆ ದಾಖಲಾತಿ

ದೊಡ್ಡಬಳ್ಳಾಪುರದ ಕಾಡನೂರು ಕೈ ಮರ ಬಳಿ ಕರು ಮತ್ತು ಲಾರಿ ನಡುವೆ ಅಪಘಾತ ಸಂಭವಿಸಿದೆ. ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಸ್ಥಳೀಯ ಆಸ್ಪತ್ರೆಗೆ ದಾಖಲಿಸಾಗಿದೆ. ಮಾರಸಂದ್ರ ಕಡೆಯಿಂದ ಬರುತ್ತಿದ್ದ ಕಾರಿಗೆ ದೊಡ್ಡಬಳ್ಳಾಪುರ ಕಡೆಯಿಂದ ವೇಗವಾಗಿ ಬರುತ್ತಿದ್ದ ಲಾರಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರಿನ ಎರಡೂ ಡೋರ್ ಗಳು ಸಂಪೂರ್ಣ ನಜ್ಜುಗುಜ್ಜಾಗಿದೆ.



ಈ ರಸ್ತೆಯಲ್ಲಿ ಅಪಘಾತಗಳು ಹೆಚ್ಚಾಗಿದ್ದು, ಟೋಲ್ ತಪ್ಪಿಸುವ ಸಲುವಾಗಿ ಈ ರಸ್ತೆಗಳಲ್ಲಿ ಬರುತ್ತಿರುವ ಲಾರಿಗಳೇ ಕಾರಣ ಎಂದು ಸ್ಥಳೀ ಯರು ಆರೋಪಿಸುತ್ತಿದ್ದಾರೆ. ಒಂದು ಕಡೆ ರಸ್ತೆಯಲ್ಲಿ ಗುಂಡಿಗಳು, ಮತ್ತೊಂದು ಕಡೆ ಭಾರೀ ವಾಹನಗಳ ಸಂಚಾರದಿಂದ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿವೆ. ಆಳಹಳ್ಳಿ, ಅರಳುಮಲ್ಲಿಗೆ, ಕಾಡನೂರು ಕೈ ಮರ, ಮಧುರೆ ವರೆಗೂ ರಸ್ತೆ ಪಕ್ಕದಲ್ಲಿ ಹೆಚ್ಚಿನ ಶಾಲೆಗಳಿದ್ದು, ಶಾಲಾಮಕ್ಕಳು ರಸ್ತೆ ದಾಟಲು



ಪರದಾಡು ವಂತಾಗಿದೆ. ಈ ಬಗ್ಗೆ ಸಂಭಂದಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಸಮಸ್ಯೆ ಬಗೆಹರಿಸುವಂತೆ. ಸ್ಥಳೀಯರು ಹಾಗೂ ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಶಿಕ್ಷಕರ ಕಿರುಕುಳಕ್ಕೆ ಬೇಸತ್ತು 10ನೇ ತರಗತಿ ವಿದ್ಯಾರ್ಥಿ ಆತ್ಮಹತ್ಯೆ



**ನವದೆಹಲಿ:** ಶಾಲಾ ಶಿಕ್ಷಕನ ಕಿರುಕುಳಕ್ಕೆ ಬೇಸತ್ತು 10ನೇ ತರಗತಿ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ. 16 ವರ್ಷದ ಶೌರ್ಯ ಪಾಟೀಲ್ ಆತ್ಮಹತ್ಯೆಗೆ ಶರಣಾದ ಬಾಲಕ. ಶಾಲಾ ಶಿಕ್ಷಕರೊಬ್ಬರು ಈತನನ್ನು ಅಪಹಾಸ್ಯ ಮಾಡುತ್ತಿದ್ದರು. ಅಸಭ್ಯವಾಗಿ ನಡೆಸಿಕೊಂಡರೆಂಬ ಆರೋಪ ಕೇಳಿಬಂದಿದೆ. ಶಾ ಲಾ ಶಿಕ್ಷಕನ ವಿರುದ್ಧ ಬಾಲಕನ ತಂದೆ ಪ್ರದೀಪ್ ಪಾಟೀಲ್ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಸೆಂಟ್ರಲ್ ದೆಹಲಿಯ ರಾಜೇಂದ್ರ ಪ್ಲೇಸ್ ಮೆಟ್ರೋ ನಿಲ್ದಾಣದ ಪ್ಲಾಟ್‌ಫಾರ್ಮ್ 2ರಲ್ಲಿ ಟ್ರ್ಯಾಕ್‌ಗೆ ಜಿಗಿದು ಸೇಂಟ್ ಕೊಲಂಬಾ ಶಾಲೆಯ ಶೌರ್ಯ ಆತ್ಮಹತ್ಯೆ ಮಾಡಿಕೊಂಡಿದ್ದ. ಆತನ ಶಾಲಾ ಬ್ಯಾಗ್‌ನಿಂದ ಡೆತ್‌ನೋಟ್ ವಶಕ್ಕೆ ಪಡೆಯಲಾಗಿದ್ದು, ತನ್ನ ಕೃತ್ಯಕ್ಕೆ ಮೂವರು ಶಿಕ್ಷಕರು ಕಾರಣ ಎಂದು ವಿದ್ಯಾರ್ಥಿ ದೂಷಿಸಿದ್ದಾನೆ. ಕಳೆದ ಒಂದು ವರ್ಷದಿಂದ ನನ್ನ ಮಗನಿಗೆ ಶಿಕ್ಷಕರು ತೊಂದರೆ ಕೊಟ್ಟಿದ್ದಾರೆ. ಈ ಬಗ್ಗೆ ಶಾಲಾ ಆಡಳಿತ ಮಂಡಳಿಗೆ ದೂರು ನೀಡಿದ್ದೆವು. ಆದರೆ, ಅವರು ನನ್ನ ಮಗನ ಕಲಿಕೆ ಮೇಲೆಯೇ ಆರೋಪ ಮಾಡಿದ್ದರು. ತರಗತಿಗಳ ಸಮಯದಲ್ಲಿ ಗಮನ ಹರಿಸಬೇಕು, ಗಣಿತದ ಅಂಕಗಳು ಕಳಪೆಯಾಗಿವೆ, ಅವನು ಅಧ್ಯಯನದ ಮೇಲೆ ಗಮನಹರಿಸಲು ಇಷ್ಟಪಡುವುದಿಲ್ಲ ಅಂತ ಹೇಳಿದ್ದರೆಂದು ಬಾಲಕನ ತಂದೆ ತಿಳಿಸಿದ್ದಾರೆ. ಶೌ ರ್ಯ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಶಾಲೆಯಲ್ಲಿ ನೃತ್ಯ ಅಭ್ಯಾಸದಲ್ಲಿ ಪಾಲ್ಗೊಂಡಿದ್ದ. ಶಾಲೆಯಲ್ಲಿ ಸ್ಟೇಜ್ ಮೇಲೆ ನೃತ್ಯ ಅಭ್ಯಾಸ ಮಾಡುವಾಗ ಬಿದ್ದಿದ್ದ. ಉದ್ದೇಶಪೂರ್ವಕವಾಗಿ ಬಿದ್ದಿದ್ದಾನೆ ಎಂದು ಶಿಕ್ಷಕರು ಅವನನ್ನು ನೃತ್ಯದಿಂದ ಸಂಪೂರ್ಣವಾಗಿ ತೆಗೆದುಹಾಕಿದರು. ಅವನು ನಾಟಕ ಮತ್ತು ಓವರ್ ಆಕ್ಟಿಂಗ್ ಮಾಡುತ್ತಿದ್ದಾನೆಂದು ಶಿಕ್ಷಕರು ಆರೋಪಿಸಿದ್ದರು. ಅದಾದ ಬೆನ್ನಲ್ಲೇ ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ಶೌರ್ಯನ ಸ್ನೇಹಿತರು ತಿಳಿಸಿದ್ದಾರೆ.

ಒಮ್ಮೆ ಶೌರ್ಯ ಅಳುತ್ತಿದ್ದಾಗ, 'ನೀನು ಎಷ್ಟು ಬೇಕಾದರೂ ಅಳು.. ನಾವು ತಲೆಕೆಡಿಸಿಕೊಳ್ಳಲ್ಲ' ಅಂತ ಶಿಕ್ಷಕರು ಹೇಳಿದ್ದರು. ಟಿಸಿ ಕೊಟ್ಟು ಮನೆಗೆ ಕಳುಹಿಸುವುದಾಗಿಯೂ ಬೆದರಿಕೆ ಹಾಕಿದ್ದರೆಂದು ಸ್ನೇಹಿತರು ವಿವರಿಸಿದ್ದಾರೆ.

ಕ್ಷಮಿಸು ಅಮ್ಮ, ನಾನು ನಿನ್ನ ಹೃದಯವನ್ನು ಘಾಸಿಗೊಳಿಸಿದ್ದೇನೆ. ಶಾಲೆಯ ಶಿಕ್ಷಕರು ಹೀಗಿದ್ದಾರೆ, ನಾನೇನು ಹೇಳಲಿ... ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬುದು ನನ್ನ ಕೊನೆಯ ಆಸೆ. ಬೇರೆ ಯಾವುದೇ ಮಗು ಇಂತಹ ಹೆಜ್ಜೆ ಇಡಲು ನಾನು ಬಯಸುವುದಿಲ್ಲ ಎಂದು ಡೆತ್‌ನೋಟ್‌ನಲ್ಲಿ ಬಾಲಕ ಬರೆದಿದ್ದಾನೆ.

## ಕನಸವಾಡಿ (ಚಿಕ್ಕ ಮಧುರೆ) ಶನಿಮಹಾತ್ಮ ದೇವಾಲಯದಲ್ಲಿ ಲಕ್ಷ ದೀಪೋತ್ಸವ: ನೂರಾರು ಭಕ್ತರ ಸಂಭ್ರಮ



**ದೊಡ್ಡಬಳ್ಳಾಪು**: ತಾಲೂಕಿನ ಕನಸವಾಡಿ (ಚಿಕ್ಕ ಮಧುರೆ) ಶನಿಮಹಾತ್ಮ ದೇವಾಲಯದಲ್ಲಿ ಕಾರ್ತಿಕ ಮಾಸ ಅಮಾವಸ್ಯೆಯ ಅಂಗವಾಗಿ ಗುರುವಾರ ರಾತ್ರಿ ಲಕ್ಷ ದೀಪೋತ್ಸವ ವೈಭವವಾಗಿ ಜರುಗಿತು. ಕಾರ್ಯಕ್ರಮದಲ್ಲಿ ಯುವತಿಯರು, ಮಹಿಳೆಯರು, ಮಕ್ಕಳು ಸೇರಿದಂತೆ ನೂರಾರು ಭಕ್ತರು ಭಾಗವಹಿಸಿ ಎಣ್ಣೆ ಹಾಗೂ ತುಪ್ಪದ ದೀಪಗಳನ್ನು ಹಚ್ಚಿ ಶನಿಮಹಾತ್ಮನ ಆರಾಧನೆ ಸಲ್ಲಿಸಿದರು. ದೇವಾಲಯದ ಆವರಣ ದೀಪಾಲಂಕಾರದಿಂದ ಕಂಗೊಳಿಸಿದ್ದು, ಶನಿಮಹಾತ್ಮ ದೇವರಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ಭಕ್ತರ ಆಗಮನದಿಂದ ದೇವಾಲಯ ಪ್ರದೇಶದಲ್ಲಿ ಧಾರ್ಮಿಕ ಸಂಭ್ರಮವಿತ್ತು.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203,
Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.

# ಬಿಎಂಟಿಸಿ ಬಸ್ಸಿನಲ್ಲಿ 5 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳ್ಳತನ

**ಬೆಂಗಳೂರು:**ಬೆಂಗಳೂರಿನಲ್ಲಿ ಸಾರ್ವಜನಿಕ ಸಾರಿಗೆ ಬಸ್ಸುಗಳಲ್ಲಿ ಚೋರಿ-ಕಳ್ಳತನ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿದೆ. ಇದಕ್ಕ ಉದಾಹರಣೆ ಎಂಬಂತೆ ಬಿಎಂಟಿಸಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರ ಬ್ಯಾಗ್‌ನಿಂದ ಸುಮಾರು 5 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣವನ್ನು ದುಷ್ಕರ್ಮಿಗಳ ಕದ್ದೊಯ್ದಿದ್ದಾರೆ. ಕದರನಹಳ್ಳಿ ಗ್ರಾಮದ ನಿವಾಸಿ ರಾಜೇಶ್ವರಿ (48) ಅವರ ಚಿನ್ನಾಭರಣ ಕಳ್ಳತನವಾಗಿದೆ.




ರಾಜೇಶ್ವರಿ ಅವರು ಆರೋಗ್ಯ ತಪಾಸಣೆಗಾಗಿ ಜಿಂದಾಲ್ ನಗರದ ಖಾಸಗಿ ಆಸ್ಪತ್ರೆಗೆ ತೆರಳಿದ್ದರು. ಸ್ಕ್ಯಾನಿಂಗ್ ಮಾಡಿಸುವಾಗ ಚಿನ್ನಾಭರಣ ಧರಿಸುವುದು ಸಾಧ್ಯವಾಗದ ಕಾರಣ, ತಾವು ಧರಿಸಿದ್ದ 40 ಗ್ರಾಂ ಚಿನ್ನದ ಸರ, ಕಿವಿವೋಲೆ, ಉಂಗುರ ಮತ್ತು ಬಳೆಗಳನ್ನು ತೆಗೆದು ತಮ್ಮ ಬ್ಯಾಗ್‌ನಲ್ಲಿ ಸುರಕ್ಷಿತವಾಗಿ ಇಟ್ಟುಕೊಂಡಿದ್ದರು. ತಪಾಸಣೆ ಮುಗಿಸಿ ಮನೆಗೆ ಮರಳುವ ಸಲುವಾಗಿ ಚಿಕ್ಕಬಿದರಕಲ್ಲು ಬಳಿಯಿಂದ KA-57 F-0599 ನಂಬರಿನ ಬಿಎಂಟಿಸಿ ಬಸ್ಸನ್ನು ಹತ್ತಿದ್ದರು. ಬಸ್ ಜನದಟ್ಟಣೆಯಿಂದ ಕಿಕ್ಕಿರಿದ್ದು, ನೂಕುನುಗ್ಗಲು ತುಂಬಾ ಇತ್ತು. ಬಸ್ ಮುಂದೆ ಸಾಗುತ್ತಿದ್ದಂತೆಯೇ ದುಷ್ಕರ್ಮಿಗಳ ಗ್ಯಾಂಗ್ ರಾಜೇಶ್ವರಿ ಅವರ ಬಳಿ ನಿಂತು, ಗೊಂದಲ ಸೃಷ್ಟಿಸಿ, ತಿಳಿಯದಂತೆ ಬ್ಯಾಗ್‌ನ ಜಿಪ್ ತೆರೆದು ಚಿನ್ನಾಭರಣದ ಕದ್ದು ಪರಾರಿಯಾಗಿದ್ದಾರೆ. ರಾಜೇಶ್ವರಿ ಅವರಿಗೆ ಏನೂ ಅರಿವಾಗದೇ ಇದ್ದ ಕಾರಣ, ಬಸ್ ತಲುಪುವಾಗ ಮಾತ್ರ ಬ್ಯಾಗ್ ತೆರೆದು ನೋಡಿದಾಗ ಚಿನ್ನಾಭರಣಗಳು ನಾಪತ್ತೆಯಾಗಿರುವುದು ಬೆಳಕಿಗೆ ಬಂದಿತು. ಅಷ್ಟೊತ್ತಿಗಾಗಲೇ ಕಳ್ಳರು ಬಸ್ಸಿನಿಂದ ಇಳಿದು ಎಸ್ಕೇಪ್ ಆಗಿದ್ದರು.

ಕಳವಾದ ಚಿನ್ನಾಭರಣಗಳ ಮೌಲ್ಯ ಸುಮಾರು 5 ಲಕ್ಷ ರೂಪಾಯಿಗಳು. ಇದರಲ್ಲಿ 30 ಗ್ರಾಂ ತೂಕದ ಚಿನ್ನದ ಸರ, ಎರಡು ಜತೆ ಕಿವಿವೋಲೆ, ಎರಡು ಉಂಗುರ ಮತ್ತು ಒಂದು ಜೋಡಿ ಬಳೆಗಳಿವೆ. ರಾಜೇಶ್ವರಿ ಅವರು ತಮ್ಮ ಮಗಳ ಮದುವೆಗಾಗಿ ಈ ಚಿನ್ನಾಭರಣಗಳನ್ನು ಖರೀದಿಸಿ ಇಟ್ಟಿದ್ದರು.

ಘಟನೆಯ ಸುದ್ದಿ ತಿಳಿದ ತಕ್ಷಣ ರಾಜೇಶ್ವರಿ ಅವರ ಪತಿ ಮತ್ತು ಸಂಬಂಧಿಕರು ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣವನ್ನು IPC ಸೆಕ್ಷನ್ 379 (ಕಳ್ಳತನ) ಅಡಿಯಲ್ಲಿ ದಾಖಲಿಸಲಾಗಿದೆ. ಪೊಲೀಸ್ ಇನ್ಸ್‌ಪೆಕ್ಟರ್ ರವಿಕುಮಾರ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದ್ದು, ಬಿಎಂಟಿಸಿ ಬಸ್ಸಿನ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಆದರೆ ಬಸ್‌ನಲ್ಲಿ ಸಿಸಿಟಿವಿ ಕ್ಯಾಮೆರಾ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ ಎಂಬ ಮಾಹಿತಿ ಲಭ್ಯವಾಗಿದ್ದು, ಇದು ತನಿಖೆಗೆ ತೊಡಕಾಗಿದೆ. ಪೊಲೀಸರು ಬಸ್ ಸ್ಟಾಪ್‌ಗಳ ಸುತ್ತಲಿನ ಸಿಸಿಟಿವಿ ದೃಶ್ಯಗಳು ಮತ್ತು ಪ್ರಯಾಣಿಕರ ಮೊಬೈಲ್ ಟ್ರ್ಯಾಕಿಂಗ್ ಮೂಲಕ ಆರೋಪಿಗಳನ್ನು ಪತ್ತೆಹಚ್ಚುವ ಪ್ರಯತ್ನ ನಡೆಸುತ್ತಿದ್ದಾರೆ. ಕಳೆದ ಒಂದು ತಿಂಗಳಲ್ಲಿ ಬೆಂಗಳೂರಿನ ಬಿಎಂಟಿಸಿ ಬಸ್ಸುಗಳಲ್ಲಿ ಇಂತಹ ಕಳ್ಳತನ ಪ್ರಕರಣಗಳು 15ಕ್ಕೂ ಹೆಚ್ಚು ವರದಿಯಾಗಿವೆ. ಜನದಟ್ಟಣೆಯನ್ನು ಬಳಸಿಕೊಂಡು ಕಿಡಿಗೇಡಿಗಳ ಗ್ಯಾಂಗ್‌ಗಳು ಮಹಿಳೆಯರ ಬ್ಯಾಗ್, ಮೊಬೈಲ್ ಮತ್ತು ಚಿನ್ನಾಭರಣಗಳನ್ನು ಗುರಿಯಾಗಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ಪೊಲೀಸರು ಪ್ರಯಾಣಿಕರಿಗೆ ಎಚ್ಚರಿಕೆ ನೀಡಿದ್ದಾರೆ.

# ರನ್ಯಾ ರಾವ್ ವಿರುದ್ಧ ಕಡಿಮೆ ದಿನದಲ್ಲಿ ₹104 ಕೋಟಿ ಮೌಲ್ಯದ 127 ಕೆಜಿ ಚಿನ್ನ ಕಳ್ಳಸಾಗಣೆ ಆರೋಪ



**ಬೆಂ ಗ ಳೂ ರು :** ಕನ್ನಡ ಚಿತ್ರ ರಂಗದ ನಟಿ ರನ್ಯಾ ರಾವ್ ಚಿ ನ್ನ ಕಳ್ಳಸಾಗಾಟ ಪ್ರಕರಣ ದಲ್ಲಿ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ವಿವರವಾದ ದೋಷಾರೋಪ ಪಟ್ಟಿ (ಚಾರ್ಜ್‌ಶೀಟ್) ಸಲ್ಲಿಸಿದೆ. ಕಳೆದ ಕೆಲ ತಿಂಗಳುಗಳಲ್ಲಿ ಆರೋಪಿಗಳು ದುಬೈಯಿಂದ ಬೆಂಗಳೂರಿಗೆ ₹104 ಕೋಟಿಗೂ ಹೆಚ್ಚು ಮೌಲ್ಯದ 127 ಕೆಜಿ ಚಿನ್ನವನ್ನು ಅಕ್ರಮವಾಗಿ ಸಾಗಿಸಿದ್ದಾರೆ ಎಂದು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ. ಈ ಪ್ರಕರಣವು ಭಾರತದ ಚಿನ್ನ ಕಳ್ಳಸಾಗಾಟದ ಜಾಲದಲ್ಲಿ ಹೊಸ ಆಯಾಮವನ್ನು ಬಹಿರಂಗಪಡಿಸಿದೆ.


ಡಿ ಆ ರ್ ಐ ಅಧಿಕಾರಿಗಳು ಸಲ್ಲಿಸಿದ 350 ಪುಟಗಳ ದೂರಿನ ಪ್ರತಿ ಮತ್ತು 2,200 ಪುಟಗಳ ಆರೋಪ ಪಟ್ಟಿಯು ಈ ಕಳ್ಳಸಾಗಾಟದ ಒಟ್ಟಾರೆ ಚಿತ್ರಣವನ್ನು ಬಹಿರಂಗಪಡಿಸುತ್ತದೆ. ಚಾರ್ಜ್‌ಶೀಟ್ ಪ್ರಕಾರ, ಆರೋಪಿಗಳು ದುಬೈಯಿಂದ ಚಿನ್ನದ ಗಟ್ಟಿಗಳನ್ನು ಏರ್‌ಪೋರ್ಟ್ ಮೂಲಕ ಸಾಗಿಸುತ್ತಿದ್ದರು.

ಈ ಕಾರ್ಯಾಚರಣೆಯ ಮೂಲಕ ಅವರು ಒಟ್ಟು 127 ಕೆಜಿ ಚಿನ್ನವನ್ನು ಸಾಗಿಸಿ, ದೇಶದ ಆರ್ಥಿಕ ನಷ್ಟಕ್ಕೆ ಕಾರಣವಾಗಿದ್ದಾರೆ. ಚಿನ್ನದ ಮಾರುಕಟ್ಟೆ ಬೆಲೆಯ ಆಧಾರದಲ್ಲಿ ಈ ಸಾಗಾಟದ ಮೌಲ್ಯ ₹104 ಕೋಟಿಗೂ ಅಧಿ ಕವೆಂದು ಅಂದಾಜಿಸಲಾಗಿದೆ. 2025ರ ಮಾರ್ಚ್ 3ರಂದು ಬೆಂಗಳೂರು ಅಂತರ ರಾಷ್ಟ್ರೀಯ ಏರ್‌ಪೋರ್ಟ್‌ನಲ್ಲಿ ಡಿಆರ್‌ಐ ಅಧಿಕಾರಿಗಳು ಹಿರಿಯ ಐಪಿಎಸ್ ಅಧಿಕಾರಿ ರಾಮಚಂದ್ರರಾವ್ ಅವರ ಮಗಳು ರನ್ಯಾ ರಾವ್ ಅವರನ್ನು ಬಂಧಿಸಿದರು. ದುಬೈನಿಂದ ಬಂದ ವಿಮಾನದಲ್ಲಿ 14 ಕೆಜಿ ಚಿನ್ನದ ಗಟ್ಟಿಯನ್ನು ಸಾಗಿಸುತ್ತಿದ್ದಾಗ ಇದು ಬೆಳಕಿಗೆ ಬಂದಿತು. ರನ್ಯಾ ರಾವ್ ಕನ್ನಡ ಚಿತ್ರಗಳಾದ 'ಕ್ಯಾಪ್ಟನ್ ಕೃಷ್ಣಮೂರ್ತಿ', 'ಸಾಹಸ ಸಿಂಹ ಗಣೇಶ' ಮುಂತಾದ ಚಿತ್ರಗಳಲ್ಲಿ ನಟಿಸಿದ್ದು, ಈ ಪ್ರಕರಣವು ಅವರ ವೃತ್ತಿಗೆ ದೊಡ್ಡ ದಿಕ್ಕೆಯಾಗಬಹುದು. ಬಂಧನದ ನಂತರ, ರನ್ಯಾ ರಾವ್ ಅವರ ಸಹಚರರಾದ ತರುಣ್ ಕೆ. ರಾಜು, ಸಾಹಿಲ್ ಸಕಾರಿಯಾ ಜೈನ್ ಮತ್ತು ಭರತ್ ಕುಮಾರ್ ಜೈನ್ ಅವರನ್ನೂ ಡಿಆರ್‌ಐ ಬಂಧಿಸಿತು. ತನಿಖೆಯಲ್ಲಿ, ಈ ಗುಂಪು ದುಬೈ-ಬೆಂಗಳೂರು ಮಾರ್ಗದಲ್ಲಿ ಕೆಲ ತಿಂಗಳುಗಳಲ್ಲಿ ನಿರಂತರವಾಗಿ ಕಳ್ಳಸಾಗಾಟ ನಡೆಸಿದ್ದು ತಿಳಿದುಬಂದಿದೆ. ತನಿಖೆ ಪೂರ್ಣಗೊಂಡ ನಂತರ, ಡಿಆರ್‌ಐ ಈ ಚಾರ್ಜ್‌ಶೀಟ್ ಸಲ್ಲಿಸಿದ್ದು, ಆರೋಪಿಗಳ ವಿರುದ್ಧ ಕಸ್ಟಮ್ಸ್ ಆಕ್ಟ್, 1962 ಮತ್ತು ಇತರ ಕಾನೂನುಗಳಡಿ ಕ್ರಿಮಿನಲ್ ಚಾರ್ಜ್‌ಗಳನ್ನು ದಾಖಲಿಸಿದೆ. ರನ್ಯಾ ರಾವ್ ಸೇರಿದಂತೆ ಎಲ್ಲ ಆರೋಪಿಗಳು ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಈ ಮಧ್ಯೆ, ಮೇ ತಿಂಗಳಲ್ಲಿ ರನ್ಯಾ ರಾವ್ ಮತ್ತು ತರುಣ್ ರಾಜು ಅವರು ಡಿಆರ್‌ಐ ಚಾರ್ಜ್‌ಶೀಟ್ ಸಲ್ಲಿಸದ ಕಾರಣದಿಂದ ಡಿಫಾಲ್ಟ್ ಬೇಲ್ ಪಡೆದಿದ್ದರು. ಆದರೆ, ಅಡಿಯಲ್ಲಿ ಇನ್ನೂ ಬಂಧನದಲ್ಲಿಯೇ ಇರುತ್ತಾರೆ. ಈ ಪ್ರಕರಣದಲ್ಲಿ ಡಿಆರ್‌ಐ ಇದೇ ತಿಂಗಳು (ಸೆಪ್ಟೆಂಬರ್ 2025) ರನ್ಯಾ ರಾವ್ ಅವರ ಮೇಲೆ ₹102.55 ಕೋಟಿ ದಂಡ ವಿಧಿಸಿದ್ದು, ಇದು ಚಿನ್ನ ಕಳ್ಳಸಾಗಾಟದ ಗಂಭೀರತೆಯನ್ನು ತೋರುತ್ತದೆ. ಒಟ್ಟು ದಂಡವು ₹270 ಕೋಟಿಗೂ ಹೆಚ್ಚಾಗಿದ್ದು, ಇದರಲ್ಲಿ ಇತರ ಆರೋಪಿಗಳ ಪಾಲು ಸೇರಿದೆ. ರಾಮಚಂದ್ರರಾವ್ ಅವರ ಮೇಲೂ ₹102 ಕೋಟಿ ದಂಡ ಹೇರಲಾಗಿದೆ. ಈ ಘಟನೆಯು ಭಾರತದ ಏರ್‌ಪೋರ್ಟ್‌ಗಳಲ್ಲಿ ಕಳ್ಳಸಾಗಾಟದ ಹೆಚ್ಚುತ್ತಿರುವ ಪ್ರಮಾಣವನ್ನು ಎತ್ತಿ ತೋರಿಸುತ್ತದೆ. 2025ರಲ್ಲಿ ಮಾತ್ರ ದುಬೈ-ಭಾರತ ಮಾರ್ಗದಲ್ಲಿ 300 ಕೆಜಿಗೂ ಹೆಚ್ಚು ಚಿನ್ನ ಕಳ್ಳಸಾಗಾಟ ಪತ್ತೆಯಾಗಿದ್ದು, ಡಿಆರ್‌ಐ ಈ ಕಾರ್ಯಾಚರಣೆಯನ್ನು ತೀವ್ರಗೊಳಿಸಿದೆ.

ರನ್ಯಾ ರಾವ್ ಅವರ ವಕೀಲರು ಚಾರ್ಜ್‌ಶೀಟ್‌ಗೆ ಸವಾಲು ಎದುರಿಸುವುದಾಗಿ ಘೋಷಿಸಿದ್ದಾರೆ. ಅವರ ಪ್ರಕಾರ, ಇದು ರಾಜಕೀಯ ಪ್ರೇರಿತವಾಗಿದೆ. ಆದರೂ, ಡಿಆರ್‌ಐ ತನಿಖೆಯು ದೃಢ ಸಾಕ್ಷ್ಯಗಳೊಂದಿಗೆ ನಡೆದಿದ್ದು, ನ್ಯಾಯಾಲಯದಲ್ಲಿ ಈ ಪ್ರಕರಣವು ತೀವ್ರ ಚರ್ಚೆಗೆ ಗುರಿಯಾಗಲಿದೆ. ಈ ಘಟನೆಯು ಸ್ವದೇಶಿ ಚಿನ್ನ ವ್ಯಾಪಾರಕ್ಕೆ ದೊಡ್ಡ ನ ಷ್ಟ ವ ನ್ನುಂ ಟು ಮಾ ಡಿ ದ್ದು , ಸರ್ಕಾರಿ ಇಲಾಖೆಗಳು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ.

ಈ ಪ್ರಕರಣವು ಕನ್ನಡ ಚಿತ್ರರಂಗದಲ್ಲಿ ಆಘಾತಕಾರಿ ಸುದ್ದಿಯಾಗಿದ್ದು, ರನ್ಯಾ ರಾವ್ ಅವರ ಭಾವಿ ವೃತ್ತಿಗೆ ಪ್ರಶ್ನೆಗಳನ್ನು ಎಬ್ಬಿಸಿದೆ. ಡಿಆರ್‌ಐಯ ತನಿಖೆಯು ಇಂತಹ ಕಳ್ಳಸಾಗಾಟ ಗುಂಪುಗಳನ್ನು ತಡೆಯಲು ಮಾದರಿಯಾಗಲಿದೆ

# ಎಸ್‌ಇಪಿ ಪರಿಶೀಲನೆಗೆ ಸಮಿತಿ ರಚನೆ: ಸಚಿವ ಡಾ.ಎಂ.ಸಿ.ಸುಧಾಕರ್ ಆದೇಶ




**ಬೆಂಗಳೂರು:** ರಾಜ್ಯ ಶಿಕ್ಷಣ ನೀತಿ (SEP) ಆಯೋಗದ ಅಂತಿಮ ವರದಿ ಸಲ್ಲಿಕೆಯಾದ ಮೂರು ತಿಂಗಳು ಕಳೆದರೂ ಇದುವರೆಗೆ ಸಂಪುಟದ ಮುಂದೆ ಬಂದಿಲ್ಲ. ಈ ವಿಳಂಬಕ್ಕೆ ಕಾರಣ ಪ್ರಧಾನ ಕಾರ್ಯದರ್ಶಿಗಳ ಆಗಾಗ ಬದಲಾವಣೆ ಎಂಬುದನ್ನು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಒಪ್ಪಿಕೊಂಡಿದ್ದಾರೆ. ಆದರೆ ಈಗ ಎಲ್ಲ ವಿಳಂಬಗಳಿಗೆ , ತಾಂತ್ರಿಕ ತೊಡಕುಗಳಿಗೆ ತೆರೆ ಎಳೆಯಲು ಸಿದ್ಧತೆ ನಡೆದಿದೆ. ಮುಂದಿನ ಎರಡೇ ದಿನಗಳಲ್ಲಿ ವರದಿ ಪರಿಶೀಲನಾ ಸಮಿತಿ ರಚನೆಯಾಗಲಿದೆ ಎಂದು ಸಚಿವರು ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಘೋಷಿಸಿದರು.

ಸುಖದೇವ್ ಥೋರಟ್ ನೇತೃತ್ವದ ರಾಜ್ಯ ಶಿಕ್ಷಣ ನೀತಿ ಆಯೋಗ ಆಗಸ್ಟ್ ತಿಂಗಳಲ್ಲೇ ತನ್ನ ಅಂತಿಮ ವರದಿಯನ್ನು ಸಲ್ಲಿಸಿತ್ತು. ಈ ವರದಿ ಯನ್ನು ಕೂಲಂಕು ಷವಾಗಿ ಪರಿಶೀಲಿಸಿ, ಸಚಿವ ಸಂಪು ಟದ ಅನುಮೋದನೆಗೆ ಸಿದ್ಧಪಡಿಸುವ ಜವಾಬ್ದಾರಿ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಮೇಲಿತ್ತು. ಆದರೆ ಕಳೆದ ಮೂರು ತಿಂಗಳಲ್ಲಿ ರಾಜ್ಯದಲ್ಲಿ ಮೂವರು ಪ್ರಧಾನ ಕಾರ್ಯದರ್ಶಿಗಳು ಬದಲಾದ ಕಾರಣ ಸಮಿತಿ ರಚನೆ ಮಾಡಿದೆ. ಈ ವಿಷಯ ಸುದ್ದಿಗೋಷ್ಠಿಯಲ್ಲಿ ಪ್ರಸ್ತಾಪವಾದಾಗ ಸಚಿವರೇ ಆಶ್ಚರ್ಯ ವ್ಯಕ್ತಪಡಿಸಿದರು.

ಸ ಮಿ ತಿ ರಚನೆಯ ಕಡತಕ್ಕೆ ಸಹಿ ಬಿದ್ದಿದೆ, ಆದರೆ ಪ್ರಧಾನ ಕಾರ್ಯದರ್ಶಿ ಋಷಿ ಗೋಯಲ್ ಚೌಧರಿ ಅವರ ಗಮನಕ್ಕೆ ಬಂದಿಲ್ಲ ಎನ್ನುವುದು ದುರದೃಷ್ಟಕರ ಎಂದು ಹೇಳಿ, ತಕ್ಷಣವೇ ಕ್ರಮ ಕೈಗೊಳ್ಳಲು ಸೂಚಿಸಿದರು. ಈಗಿನ ಯೋಜನೆ ಪ್ರಕಾರ, ಮುಂದಿನ 48 ಗಂಟೆಗಳಲ್ಲೇ ಅಧಿಕಾರಿಗಳ ಸಮಿತಿ ರಚನೆಯಾಗಲಿದೆ. ಈ ಸಮಿತಿ ವರದಿಯ ಎಲ್ಲ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಎರಡು ತಿಂಗಳೊಳಗೆ ಸಂಪುಟಕ್ಕೆ ಸಲ್ಲಿಸಲಿದೆ. ನಂತರ ಸಾರ್ವಜನಿಕ ಚರ್ಚೆಗೆ ವರದಿಯನ್ನು ಮುಕ್ತಗೊಳಿಸಲಾಗುವುದು ಎಂದು ಸಚಿವರು ಭರವಸೆ ನೀಡಿದ್ದಾರೆ. ಈಗಾಗಲೇ ಆಯೋಗದ ಮಧ್ಯಂತರ ವರದಿಯ ಶಿಫಾರಸುಗಳಲ್ಲಿ ಹಲವನ್ನು ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಲಾಗಿದೆ. 2025-26ನೇ ಶೈಕ್ಷಣಿಕ ಸಾಲಿನಿಂದಲೇ ರಾಜ್ಯ ಶಿಕ್ಷಣ ನೀತಿಯನ್ನು ಆಂಶಿಕವಾಗಿ ಜಾರಿಗೊಳಿಸಲಾಗಿದೆ. ಕೇಂದ್ರದ ಬಿಜೆಪಿ ಸರ್ಕಾರ ಯಾವುದೇ ಪೂರ್ವತಯಾರಿ ಇಲ್ಲದೆ ತರಾತುರಿಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (NEP-2020) ಜಾರಿಗೆ ತಂದಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ರಾಜ್ಯ ಶಿಕ್ಷಣ ನೀತಿ ಆಯೋಗ ರಚಿಸಿ, ಸ್ವತಂತ್ರ ರಾಜ್ಯ ನೀತಿ ರೂಪಿಸುವ ಕೆಲಸ ಆರಂಭಿಸಿತು. ಈಗ ಅಂತಿಮ ವರದಿಯಲ್ಲಿ ಉಳಿದಿರುವ ಕೆಲವೇ ಅಂಶಗಳನ್ನು ಅಳವಡಿಸಿಕೊಳ್ಳಬೇಕಿದೆ ಎಂದು ಡಾ. ಸುಧಾಕರ್ ತಿಳಿಸಿದರು.

ರಾಜ್ಯ ಶಿಕ್ಷಣ ನೀತಿಯು ಕರ್ನಾಟಕದ ಸಾಂಸ್ಕೃತಿಕ, ಭಾಷಿಕ ಹಾಗೂ ಆರ್ಥಿಕ ವೈಶಿಷ್ಟ್ಯಗಳಿಗೆ ಸಂಪೂರ್ಣ ಹೊಂದಿಕೊಳ್ಳುವಂತೆ ರೂಪಿತವಾಗಿದೆ ಎಂದು ಸಚಿವರು ಹೇಳಿಕೊಂಡರು. ಇದು ವಿದ್ಯಾರ್ಥಿಗಳ ಸ್ಥಳೀಯ ಭಾಷೆಯಲ್ಲಿ ಉನ್ನತ ಶಿಕ್ಷಣ, ಬಹುಭಾಷಾ ಆಯ್ಕೆ, ವೃತ್ತಿಶ 4-ವರ್ಷ ಪದವಿ ಕೋರ್ಸ್‌ಗಳಲ್ಲಿ ಹೊಸ ಅವಕಾಶಗಳು, ಸಂಶೋಧನೆಗೆ ಒತ್ತು ನೀಡುವುದು ಮುಂತಾದ ವಿಷಯಗಳನ್ನು ಒಳಗೊಂಡಿದೆ.

# ದುಬೈ ಏರ್‌ಶೋನಲ್ಲಿ ತೇಜಸ್ ಯುದ್ಧ ವಿಮಾನ ಪತನ



**ಅಬುಧಾಬಿ:** ದುಬೈನಲ್ಲಿ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ ವೈಮಾನಿಕ ಪ್ರದರ್ಶನದ ವೇಳೆ ಆಗಸದಲ್ಲಿ ಹಾರುತ್ತಿದ್ದಾಗಲೇ ತೇಜಸ್ ಯುದ್ಧ ವಿಮಾನ ಪತನಗೊಂಡಿರುವ ಘಟನೆ ನಡೆದಿದೆ ಬೆಂಗಳೂರಿನ ಹೆಚ್‌ಎಎಲ್ (HAL) ನಿರ್ಮಿತ ಲಘು ಯುದ್ಧ ವಿಮಾನವು ಸ್ಥಳೀಯ ಕಾಲಮಾನ ಇಂದು ಮಧ್ಯಾಹ್ನ 2:10ರ ಸುಮಾರಿಗೆ ವೈಮಾನಿಕ ಪ್ರದರ್ಶನ ನೀಡುವಾಗ ಪತನಗೊಂಡಿದೆ. ಸದ್ಯ ತೇಜಸ್ ಯುದ್ಧವಿಮಾನ ಪತನಗೊಂಡಿರುವ ವಿಡಿಯೋ ತುಣುಕುಗಳು ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿವೆ.ವಿಮಾನ ಪತನಗೊಂಡ ಸ್ಥಳದಲ್ಲಿ ದಟ್ಟ ಹೊಗೆ ಆವರಿಸಿದ್ದು, ವೈಮಾನಿಕ ಪ್ರದರ್ಶನ ವೀಕ್ಷಿಸಲು ಆಗಮಿಸಿದ್ದ ಸಾವಿರಾರು ಸಂಖ್ಯೆಯ ಪ್ರೇಕ್ಷಕರಲ್ಲಿ ಆತಂಕ ಮೂಡಿಸಿದೆ ಸದ್ಯ ಘಟನೆಯಲ್ಲಿ ಪೈಲಟ್ ಕೂಡ ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ

ಆದ್ರೆ ಇದು ತಾಂತ್ರಿಕ ದೋಷದಿಂದ ಆಗಿದೆಯೇ? ಅಥವಾ ಪೈಲಟ್‌ನ ದೋಷದಿಂದ ಆಗಿದೆಯೇ ಎಂಬುದು ಇನ್ನಷ್ಟೇ ತಿಳಿಯಬೇಕಿದೆ. ತಂತ್ರಜ್ಞರ ತಂಡ ಸ್ಥಳಕ್ಕೆ ಧಾವಿಸಿದ್ದು, ವಿಮಾನ ಪತನಕ್ಕೆ ಕಾರಣಗಳನ್ನ ಹುಡುಕಲಾಗುತ್ತಿದೆ.

**ನವೆಂಬರ್ 27 ರಂದು ನಿಮ್ಮ ಡಿಜಿಟಲ್ ವಾರ್ತೆ ದಿನಪತ್ರಿಕೆ ಹಾಗೂ ಡಿಜಿಟಲ್ ವಾಹಿನಿ ನೂತನ ಕಚೇರಿ ಉದ್ಘಾಟನೆಗೊಳ್ಳಲಿದ್ದು , ಸರ್ವರಿಗೂ ಆತ್ಮೀಯ ಆಮಂತ್ರಣ**

# ಮಕ್ಕಳಿಗೂ ಹೆಲ್ಮೆಟ್ ಕಡ್ಡಾಯ: ಹೈಕೋರ್ಟ್ ಮಹತ್ವದ ಆದೇಶ



**ಬೆಂಗಳೂರು:** ದ್ವಿಚಕ್ರ ವಾಹನಗಳಲ್ಲಿ ಸವಾರಿ ಮಾಡುವ ಚಿಕ್ಕ ಮಕ್ಕಳ ಸುರಕ್ಷತೆಗೆ ಸಂಬಂಧಿ ಸಿದಂತೆ ಕರ್ನಾಟಕ ಹೈಕೋರ್ಟ್ ಮಹತ್ವದ ಆದೇಶ ಹೊರಡಿಸಿದೆ. 'ಒಂಬತ್ತು ತಿಂಗಳಿನಿಂದ ನಾಲ್ಕು ವರ್ಷದೊಳಗಿನ ಮಕ್ಕಳನ್ನು ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಕರೆದುಕೊಂಡು ಹೋಗುವಾಗ, ಮಕ್ಕಳು ಹೆಲ್ಮೆಟ್ ಧರಿಸುವುದು ಕಡ್ಡಾಯ' ಎಂದು ನ್ಯಾಯಮೂರ್ತಿ ವಿಭು ಬಖ್ರು ಅವರು ನೇತೃತ್ವ ವಹಿಸಿದ್ದ ವಿಭಾಗೀಯ ನ್ಯಾಯಪೀಠ ತೀರ್ಪು ನೀಡಿದೆ. ಶಿ ವ ಮೊ ಗ್ಗ ದ ಕಟೀಲ್ ಅಶೋಕ ಪೈ ಸ್ಮಾರಕ ಕಾಲೇಜಿನ ಮನೋವಿಜ್ಞಾನ ವಿಭಾಗದ ಮುಖ್ಯಸ್ಥೆ ಕೆ. ಅರ್ಚನಾ ಭಟ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಪೀಠ ಈ ಆದೇಶವನ್ನು ನೀಡಿದೆ ಕೇಂದ್ರ ನಿಯಮಗಳನ್ನು ಜೋರಾಗಿ ಜಾರಿಗೆ ತರಲು ಆದೇಶ

ನ್ಯಾಯಪೀಠವು ತನ್ನ ತೀರ್ಪಿನಲ್ಲಿ, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೋಟಾರು ವಾಹನ ನಿಯಮಗಳನ್ನು ತಕ್ಷಣವೇ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಸ್ಪಷ್ಟಪಡಿಸಿದೆ. "ಈ ನಿಯಮಗಳನ್ನು ಜಾರಿಗೆ ತರಲು ಅಧಿಕಾರಿಗಳು ಹಲವು ಕ್ರಮಗ ಳನ್ನು ಕೈಗೊಂಡಿದ್ದಾರೆ. ಆದರೆ, ವಾಸ್ತ ವವಾಗಿ ಅವುಗಳಾವುವೂ ಕಠಿಣ ರೀತಿಯಲ್ಲಿ ಜಾರಿಗೆ ಬಂದಿಲ್ಲ. ಹೀಗಾಗಿ, ಸರ್ಕಾರ ತಕ್ಷಣವೇ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಪೀಠವು ಆದೇಶ ಹೊರಡಿಸಿದೆ.

ವೇಗ ಪರಿಮಿತಿ ಮತ್ತು ಆರು ತಿಂಗಳ ಅವಧಿ ಹೈಕೋರ್ಟ್ ತನ್ನ ಆದೇಶದಲ್ಲಿ ಕೇಂದ್ರ ಸರ್ಕಾರದ ನಿಯಮಗಳನ್ನೇ ಉಲ್ಲೇಖಿಸಿದೆ. ಅದರ ಪ್ರಕಾರ: ನಾಲ್ಕು ವರ್ಷದೊಳಗಿನ ಮಕ್ಕಳನ್ನು ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಕರೆದುಕೊಂಡು ಹೋಗುವಾಗ ವಾಹನದ ವೇಗ ಗಂಟೆಗೆ 40 ಕಿಲೋಮೀಟರಿಗಿಂತ ಹೆಚ್ಚಿರಬಾರದು.

ಮಾರುಕಟ್ಟೆಯಲ್ಲಿ ಮಕ್ಕಳಿಗೆ ಅನುಕೂಲವಾದ ಸುರಕ್ಷತಾ ಪರಿಕರಗಳು (ಚೈಲ್ಡ್ ಹೆಲ್ಮೆಟ್ಗಳು) ಸರಬರಾಜು ಮತ್ತು ಲಭ್ಯತೆ ಇದೆಯೇ ಎಂದು ಖಚಿತಪಡಿಸಿಕೊಳ್ಳುವ ಆರು ತಿಂಗಳ ಅವಧಿ ನೀಡಲಾಗಿದೆ. ಈ ಆರು ತಿಂಗಳ ನಂತರ ರಾಜ್ಯ ಸರ್ಕಾರವು ಈ ನಿಯಮಗಳನ್ನು ಪೂರ್ಣವಾಗಿ ಜಾರಿಗೆ ತರಬೇಕು.

ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ನಿರ್ದೇಶನ ನಿಯಮಗಳ ಜಾರಿಯ ಜೊತೆಗೆ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಸರ್ಕಾರವು ಮುಂದುವರೆಸಬೇಕು ಎಂದೂ ನ್ಯಾಯಪೀಠವು ಸೂಚಿಸಿದೆ. ರಸ್ತೆ ಸುರಕ್ಷತಾ ನಿಯಮಗಳ ಪಾಲನೆ ಮತ್ತು ಚಿಕ್ಕ ಮಕ್ಕಳ ಸುರಕ್ಷತೆಯ ಬಗ್ಗೆ ಜನಸಾಮಾನ್ಯರಿಗೆ, ವಿಶೇಷವಾಗಿ ಪೋಷಕರಿಗೆ ತಿಳುವಳಿಕೆ ನೀಡುವ ಕಾರ್ಯಕ್ರಮಗಳನ್ನು ಸಕ್ರಿಯಗೊಳಿಸಬೇಕು ಎಂದು ನಿರ್ದೇಶನ ನೀಡಲಾಗಿದೆ.

ಈ ಸಂದರ್ಭದಲ್ಲಿ ನ್ಯಾಯಮೂರ್ತಿ ಮಾತನಾಡಿ, ಚಿಕ್ಕ ಮಕ್ಕಳು ನಮ್ಮ ಸಮಾಜದ ಭವಿಷ್ಯ. ಅವರ ಸುರಕ್ಷತೆಯ ಬಗ್ಗೆ ನಾವೆಲ್ಲರೂ ಗಂಭೀರವಾಗಿ ಯೋಚಿಸಬೇಕು. ರಸ್ತೆಗಳ ಮೇಲೆ ಪ್ರತಿದಿನ ಸಂಭವಿಸುತ್ತಿರುವ ಅಪಘಾತಗಳು ಮತ್ತು ಜೀವನದ ನಷ್ಟವನ್ನು ಗಮನದಲ್ಲಿಟ್ಟುಕೊಂಡರೆ, ಈ ರೀತಿಯ ಕಟ್ಟುನಿಟ್ಟಾದ ಕ್ರಮಗಳು ಅತ್ಯಗತ್ಯ, ಎಂದು ಅಭಿಪ್ರಾಯಪಟ್ಟರು. ಈ ತೀರ್ಪಿನೊಂದಿಗೆ, ರಾಜ್ಯದ ಎಲ್ಲಾ ಪೊಲೀಸ್ ಕಮಿಷನರುಗಳು ಮತ್ತು ಸಾರಿಗೆ ಇಲಾಖೆಗಳು ಈ ನಿಯಮಗಳನ್ನು ಕಾರ್ಯರೂಪದಲ್ಲಿ ಕಾರ್ಯಗತಗೊಳಿಸುವ ಕ್ರಮಕ್ಕೆ ಚಾಲನೆ ನೀಡಲಾಗುವುದು. ಈ ಆದೇಶವು ರಾಜ್ಯದ ರಸ್ತೆ ಸುರಕ್ಷತೆಯಲ್ಲಿ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಲಿದೆ.

# ನೆಲಮಂಗಲದಲ್ಲಿ 17 ಲಕ್ಷ ರೂ. ಮೌಲ್ಯದ ಚಾಕೊಲೇಟ್ ಬಾಕ್ಸ್ ದರೋಡೆ



**ಬೆಂಗಳೂರು,** ಬೆಂಗಳೂರಿನಲ್ಲಿ ಎಟಿಎಂ ಕ್ಯಾಶ್ ವ್ಯಾನ್‌ನಿಂದ 7.11 ಕೋಟಿ ರೂಪಾಯಿ ದರೋಡೆ ಪ್ರಕರಣದ ಬೆಂಕಿ ಆರುವ ಮೊದಲೇ ಮೊತ್ತೊಂದು ಆಘಾತಕಾರಿ ಘಟನೆ ಬೆಂಗಳುರಿನಲ್ಲಿ ನಡೆದಿದೆ. ನೆಲಮಂಗಲ ತಾಲೂಕಿನಲ್ಲಿ ಜಾನ್ಸನ್ ಎಂಟರ್‌ಪ್ರೈಸಸ್ ಕಂಪನಿಯಲ್ಲಿ 17 ಲಕ್ಷ ರೂಪಾಯಿ ಮೌಲ್ಯದ ನೂರಾರು ಚಾಕೊಲೇಟ್ ಬಾಕ್ಸ್‌ಗಳನ್ನು ಕದ್ದು ಆರೋಪಿಗಳು ಪರಾರಿಯಾಗಿದ್ದಾರೆ.

ಜಾನ್ಸನ್ ಎಂಟರ್‌ಪ್ರೈಸಸ್ ಕಂಪನಿಯ ಮಹೀಂದ್ರ ಬುಲೆಟ್ ಮಾಡೆಲ್ ವಾಹನವು ಬೆಂಗಳೂರಿನಿಂದ ಹಾಸನದತ್ತ ಚಾಕೊಲೇಟ್ ಸರಕುಗಳನ್ನು ಸಾಗಿಸುತ್ತಿತ್ತು. ಈ ವಾಹನವನ್ನು ಚಾಲಕ ರಂಜಿತ್ ಕುಮಾರ್ (32) ಚಲಾಯಿಸುತ್ತಿದ್ದರು. ಹಾಸನದ ವ್ಯಾಪಾರಿ ನರೇಶ್ ಕುಮಾರ್ ಅವರಿಗೆ ಈ ಸರಕುಗಳನ್ನು ಅನ್‌ಲೋಡ್ ಮಾಡಬೇಕಿತ್ತು. ಆದರೆ ನೆಲಮಂಗಲದ ಬಳಿಯಲ್ಲಿ ವಾಹನ ನಿಂತುಕೊಂಡ ನಂತರ ಚಾಕೊಲೇಟ್ ಬಾಕ್ಸ್‌ಗಳು ಸಂಪೂರ್ಣವಾಗಿ ನಾಪತ್ತೆಯಾಗಿವೆ. ವಾಹನದಲ್ಲಿ 500ಕ್ಕೂ ಹೆಚ್ಚು ಚಾಕೊಲೇಟ್ ಬಾಕ್ಸ್‌ಗಳಿದ್ದವು, ಇದರ ಮೌಲ್ಯ 17 ಲಕ್ಷ ರೂಪಾಯಿಗಳು.

ಪ್ರಾಥಮಿಕ ತನಿಖೆಯಲ್ಲಿ, ರಾಬರಿಕೋರರು ಚಾಲಕ ರಂಜಿತ್ ಅವರ ಸಹಾಯದಿಂದಲೇ ಈ ಕೆಲಸ ಮಾಡಿದ್ದಾರೆ ಎಂಬ ಶಂಕೆ ವ್ಯಕ್ತವಾಗಿದೆ. ರಂಜಿತ್ ಅವರು ವಾಹನವನ್ನು ನಿಲ್ಲಿಸಿ, ಕೆಲವು ಅಪರಿಚಿತರಿಗೆ ಸರಕುಗಳನ್ನು ಹಸ್ತಾಂತರಿಸಿದ್ದಾರೆ ಎಂದು ಸಿಸಿಟಿವಿ ದೃಶ್ಯಗಳು ಸೂಚಿಸುತ್ತಿವೆ. ಈ ಘಟನೆಯು ಬುಧವಾರ ರಾತ್ರಿ 10 ಗಂಟೆ ಸುಮಾರಿಗೆ ನಡೆದಿದ್ದು, ರಂಜಿತ್ ಅವರು ಹಾಸನಕ್ಕೆ ತಲುಪಿ ನರೇಶ್ ಅವರಿಗೆ ಸರಕುಗಳು ಇಲ್ಲ ಎಂದು ಮಾಹಿತಿ ನೀಡಿದ್ದಾರೆ. ಕಂಪನಿಯ ಮ್ಯಾನೇಜರ್ ಗುಣಶೇಖರ್ ಶೆಟ್ಟಿ ಅವರು ಗುರುವಾರ ಬೆಳಿಗ್ಗೆ ಈ ವಿಷಯ ತಿಳಿದು ಆಘಾತಗೊಂಡಿದ್ದಾರೆ.

ಕಂಪನಿಯ ಜಿಪಿಎಸ್ ಟ್ರ್ಯಾಕಿಂಗ್ ಸಿಸ್ಟಮ್ ಮೂಲಕ ಪರಿಶೀಲಿಸಿದಾಗ, ವಾಹನ ದೊಡ್ಡಬಳ್ಳಾಪುರ ರಸ್ತೆಯ ಇಸ್ಲಾಂಪುರ ಗ್ರಾಮದ ಬಳಿಯಲ್ಲಿ ನಿಂತಿರುವುದು ಗೊತ್ತಾಯಿತು. ಇಸ್ಲಾಂಪುರವು ಕಳೆದ ಕೆಲ ವರ್ಷಗಳಲ್ಲಿ ಹಲವು ದರೋಡೆ ಪ್ರಕರಣಗಳಿಗೆ ಹೆಸರುವಾಸಿಯಾಗಿದ್ದು, ಈ ಗ್ರಾಮದಲ್ಲಿ ಒಂದು ಗ್ಯಾಂಗ್ ಚಟುವಟಿಕೆಯಲ್ಲಿದೆ ಎಂದು ಪೊಲೀಸ್ ಸೋರ್ಸ್‌ಗಳು ತಿಳಿಸಿವೆ. ಪೊಲೀಸ್ ತಂಡವು ಸ್ಥಳಕ್ಕೆ ತಲುಪಿ ವಾಹನವನ್ನು ಪರಿಶೀಲಿಸಿದಾಗ, ಚಾಕೊಲೇಟ್ ಬಾಕ್ಸ್‌ಗಳ ಸ್ಥಾನದಲ್ಲಿ ಖಾಲಿ ಬಾಕ್ಸ್‌ಗಳು ಮಾತ್ರ ಉಳಿದಿವೆ. ವಾಹನದ ಡೋರ್ ಮತ್ತು ಟೈರ್‌ಗಳು ಹಾನಿಗೊಳಗಾಗಿವೆ ಎಂದು ತನಿಖೆಯಲ್ಲಿ ಕಂಡುಬಂದಿದೆ.

ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕಂಪನಿ ಮ್ಯಾನೇಜರ್ ಗುಣಶೇಖರ್ ಅವರು ಗುರುವಾರ ಮಧ್ಯಾಹ್ನ ಪ್ರಕರಣ ದಾಖಲು ಮಾಡಿದ್ದಾರೆ. ಇದು IPC ಸೆಕ್ಷನ್ 379 (ಚೋರಿ) ಮತ್ತು 420 (ಮೋಸ) ಅಡಿಯಲ್ಲಿ ದಾಖಲಾಗಿದೆ.

# ಬಂಗಾಳ, ಜಾರ್ಖಂಡ್‌ನ 42 ಸ್ಥಳಗಳಲ್ಲಿ ಇ.ಡಿ ದಾಳಿ ಭಾರೀ ಪ್ರಮಾಣದ ನಗದು, ಚಿನ್ನ ಪತ್ತೆ



**ಕೋ ಲ್ಕ ತ್ತಾ ರಾಂಚಿ:** ಕಲ್ಲಿದ್ದಲು ಮಾಫಿಯಾ) ವಿರುದ್ಧ ಹಣ ವರ್ಗಾವಣೆ ತನಿಖೆಯನ್ನು ತೀವ್ರಗೊಳಿಸಿರುವ ಜಾರಿ ನಿರ್ದೇಶನಾಲಯ (ED) ಶುಕ್ರವಾರ ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದ 42 ಸ್ಥಳಗಳ ಮೇಲೆ ದಾಳಿ ನಡೆಸಿದೆ. ದಾಳಿ ವೇಳೆ ಅಪಾರ ಪ್ರಮಾಣದ ಚಿನ್ನಾಭರಣ ಹಾಗೂ ನಗದು ಪತ್ತೆಯಾಗಿದೆ.

ಬೆಳಿಗ್ಗೆ 6 ಗಂಟೆ ಸುಮಾರಿಗೆ ನಡೆದ ದಾಳಿಯಲ್ಲಿ ಫೆಡರಲ್ ತನಿಖಾ ಸಂಸ್ಥೆಯ ಸುಮಾರು 100 ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು. ದೊಡ್ಡ ಪ್ರಮಾಣದ ಕಲ್ಲಿದ್ದಲು ಮಾಫಿಯಾ ನಡೆದಿದ್ದು, ಇದರಿಂದ ಸರ್ಕಾರಕ್ಕೆ ನೂರಾರು ಕೋಟಿ ರೂ. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಜಾರ್ಖಂಡ್‌ನಲ್ಲಿ ಇಡಿ 18 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದು, ಪಶ್ಚಿಮ ಬಂಗಾಳದಲ್ಲಿ ದುರ್ಗಾಪುರ, ಪುರುಲಿಯಾ, ಹೌರಾ ಮತ್ತು ಕೋಲ್ಕತ್ತಾದಾದ್ಯಂತ 24 ಸ್ಥಳಗಳಲ್ಲಿ ಶೋಧ ನಡೆಸುತ್ತಿದೆ. ದಾಳಿ ವೇಳೆ ಹಣಕಾಸು ವಹಿವಾಟುಗಳಿಗೆ ಸಂಬಂಧಿಸಿದ ದಾಖಲೆಗಳು ಹಾಗೂ ಕೆಲವು ಡಿಜಿಟಲ್ ದಾಖಲೆಗಳನ್ನು ಇಡಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

# ಗೆಳೆಯನ ಮದ್ವೆಗೆಂದು ಜರ್ಮನಿಯಿಂದ ಬಂದ ಯುವಕ ದುರಂತ ಸಾವು



**ನೆಲಮಂಗಲ**: ನಗರದಲ್ಲಿ ಫ್ಲೆಕ್ಸ್ ಹಾವಳಿ ನಿಂತ್ತಿಲ್ಲ. ಇದೇ ಫ್ಲೆಕ್ಸ್‌ನಿಂದ ಮತ್ತೊಂದು ಜೀವ ಹೋಗಿದೆ. ಬೈಕ್‌ನಲ್ಲಿ ತೆರಳುವಾಗ ಫ್ಲೆಕ್ಸ್ ತಗುಲಿ ಯುವಕ ರಸ್ತೆಗೆ ಬಿದ್ದಿದ್ದಾನೆ. ಮೂರು ದಿನಗಳ ಕಾಲ ಜೀವನ್ಮರಣ ಹೋರಾಟ ನಡೆಸಿ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ ತೇಜಸ್ ಗೌಡ (27) ಮೃತ ಯುವಕ. ಜರ್ಮನಿಯಲ್ಲಿ ಎಂ.ಎಸ್ ಓದುತ್ತಿದ್ದ ತೇಜಸ್ ಗೌಡ, ಸ್ನೇಹಿತನ ಮದುವೆ ಅಂತ ಊರಿಗೆ ಬಂದಿದ್ದ ವೇಳೆ ದುರಂತ ಸಂಭವಿಸಿದೆ. ನೆಲಮಂಗಲ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಿಸೆಪ್ಷನ್ ಮುಗಿಸಿ ಬೈಕ್ ನಲ್ಲಿ ತೆರಳುವ ವೇಳೆ ನಡೆಯಿತು ದುರಂತ ತೇಜಸ್ ಗೌಡ ವಿದೇಶದಲ್ಲಿ ಎಂಎಸ್ ಕೊನೆಯ ವರ್ಷದ ವಿದ್ಯಾಭ್ಯಾಸ ಮಾಡುತ್ತಿದ್ದು, ನೂರಾರು ಕನಸುಗಳನ್ನ ಕಟ್ಟಿಕೊಂಡಿದ್ದ ಯುವಕ. ಸ್ನೇಹಿತನ ಮದುವೆ ಅಂತ ಮೂರು ದಿನಗಳ ಹಿಂದೆ ಹುಟ್ಟೂರಿನ ನೆಲಮಂಗಲಕ್ಕೆ ಬಂದಿದ್ದ. ರಿಸೆಪ್ಷನ್ ಮುಗಿಸಿ ಬೈಕ್‌ನಲ್ಲಿ ತೆರಳುವ ವೇಳೆ ಈ ಘನಘೋರ ದುರಂತ ನಡೆದು ಹೋಗಿದೆ.

ಈ ಘಟನೆ ಬೆಂಗಳೂರು ಹೊರವಲಯ ನೆಲಮಂಗಲ ನಗರದ ಬೆಸ್ಕಾಂ ಕಚೇರಿಯ ಮುಂದೆ ಕಳೆದ ಮೂರು ದಿನಗಳ ಹಿಂದೆ ಸಂಭವಿಸಿದೆ. ದುರಂತದಲ್ಲಿ ಗಂಭೀರ ಗಾಯಗೊಂಡಿದ್ದ ತೇಜಸ್ ನನ್ನ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ನೀಡಲಾಗಿತ್ತು, ಆದರೆ ವಿಧಿಯಾಟಕ್ಕೆ ಚಿಕಿತ್ಸೆ ಫಲಕಾರಿ ಯಾಗದೆ ಕೊನೆಯುಸಿರೆಳೆದಿದ್ದಾನೆ.

ಮೃತ ಯುವಕನ ತಂದೆ ಟೂರ್ಸ್ ಆ್ಯಂಡ್ ಟ್ರಾವೆಲ್ಸ್ ನಡೆಸಿಕೊಂಡು ಜೀವನ ನಡೆಸುತ್ತಿದ್ದರು. ಇದ್ದ ಒಬ್ಬ ಮಗನನ್ನ ಕಳೆದುಕೊಂಡ ಕುಟುಂಬಸ್ತರು ಕಣ್ಣೀರಲ್ಲಿ ಕೈ ತೊಳೆಯುವಂತಾಗಿದೆ.

ಬೆಂಗಳೂರು ಹೊರವಲಯದ ನೆಲಮಂಗಲ ನಗರದಲ್ಲಿ ಪ್ರಚಾರದ ಫ್ಲೆಕ್ಸ್, ಬ್ಯಾನರ್‌ಗಳು ಅತಿಕ್ರಮವಾಗಿ ರಾರಾಜಿಸುತ್ತಿವೆ. ಇದು ನಗರಸಭೆಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ಜನಸಾಮಾನ್ಯರ ಆಕ್ರೋಶಕ್ಕೆ ಕಾರಣವಾಗಿದೆ. ಒಟ್ಟಾರೆ ಬಡತನದಲ್ಲಿ ಹುಟ್ಟಿ ಕಠಿಣ ಪರಿಶ್ರಮದಿಂದ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಿ ನಾಡಿಗೆ ತನ್ನ ಸಾಧನೆ ತಿಳಿಸುವ ಹಂಬಲದಲ್ಲಿದ್ದ ತೇಜಸ್, ಫ್ಲೆಕ್ಸ್ ಹಾವಳಿಗೆ ದುರಂತ ಅಂತ್ಯವಾಗಿದ್ದಾನೆ. ಇನ್ನಾದರು ಅಧಿಕಾರಿಗಳು ಅಮಾಯಕ ಜೀವಗಳ ಜೊತೆಗೆ ಚೆಲ್ಲಾಟವಾಡುವುದನ್ನು ಬಿಟ್ಟು ತೆರವು ಕಾರ್ಯ ಮಾಡಿ ಶಾಶ್ವತವಾಗಿ ಫ್ಲೆಕ್ಸ್ ಹಾವಳಿಗೆ ಬ್ರೇಕ್ ಹಾಕಬೇಕಿದೆ.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203,
Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.